ಕೊಡಗಂ ಜಿಲ್ಲೆಯಂಲ್ಲಿನ ಅಪೀಲಂ ಪ್ರಾಧಿಕಾರದ ಬಗ್ಗೆ

೮೧೩ (೫) ಡಿ.ಎ. ಚಿನ್ನಪ್ಪ (ಮಡಿಕೇರಿ) —ಮಾನ್ಯ ಕಂದಾಯಂ ಯೋಜನಾ ಹಾಗೂ ಕಾರ್ಮಿಕ ಮಂಂತ್ರಿಗಳಂ ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸಂವರೆ ?

೧ ಕೊಡಗಂ ಜಿಲ್ಲೆಯಲ್ಲಿ ಒಂದು ಅಪೀಲು ಪ್ರಾಧಿಕಾರವಿರಂವುದು ನಿಜವೆ ?

೨ ಹಾಗಿದ್ದಲ್ಲಿ ಮಂಂಡನಾಧಿಕಾರಿಗಳಿಗೆ ನೀಡಲಾಗಿರುವ ಸೌಲಭ್ಯಗಳೇನು ?

೩ ಸದರಿ ಅಪೀಲಂ ಪ್ರಾಧಿಕಾರದಲ್ಲಿ ಅದುವರೆಗೆ ಇತ್ಯರ್ಥಕ್ಕಾಗಿ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ?

೪ ಒಟ್ಟು ತೀರ್ಮಾನವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು ?

೫ ರಾಜ್ಯದಲ್ಲಿರುವ ಎಲ್ಲಾ ಅಪೀಲಂ ಪ್ರಾಧಿಕಾರಗಳಿಗೂ ತಗಲಿರುವ ವೆಚ್ಚ ಎಷ್ಟು ?

ಶ್ರೀ ಎಸ್, ಆರ್. ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂಂತ್ರಿಗಳು)—

೧ ಹೌದು ಕೊಡಗಂ ಜಿಲ್ಲೆಯಲ್ಲಿ ಒಂದು ಅಪೀಲು ಪ್ರಾಧಿಕಾರವಿರಂವುದು ನಿಜ

೨ ಮಂಂಡಲಾಧಿಕಾರಿಗಳಂ ನ್ಯಾಯಾಂಗ ಅಧಿಕಾರಿಯಂ ಮೇಲ್ವಿಚಾರಣೆಯಲ್ಲಿ ಸರ್ಕಾರದ ಪರವಾಗಿ ಕೆಲಸ ಮಾಡಬೇಕಾಗಿರುತ್ತದೆ. ಆದುದರಿಂದ ನ್ಯಾಯಾಂಗ ಅಧಿಕಾರಿಗೆ ನೀಡಲಾದ ಸೌಲಭ್ಯಗಳನ್ನೆಲ್ಲಾ ಮಂಂಡನಾಧಿಕಾರಿಗಳಂ ಉಪಯೋಗಿಸಬಹುದು. ಮಂಂಡನಾಧಿಕಾರಿಗಳಿಗಾಗಿ ಪ್ರತ್ಯೇಕ ಸೌಲಭ್ಯಗಳಿಲ್ಲ.

೩ ದಿನಾಂಕ ೩೧–೧೨–೮೬ರಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ೮೫

೪ ೮೫ ಅರ್ಜಿಗಳಲ್ಲಿ ೧೫ ಅರ್ಜಿಗಳು ಇದಂವರೆವಿಗೂ ತೀರ್ಮಾನವಾಗಿದೆ

೫ ರಾಜ್ಯದಲ್ಲಿರುವ ಎಲ್ಲಾ ಅಪೀಲು ಪ್ರಾಧಿಕಾರಿಗಳಿಗೂ ಈವರೆವಿಗೂ ತಗಲಿರುವ ವೆಚ್ಚ ೧.೦೫ ಕೋಟಿ ರೂ.

ಸಭೆಯಂ ಮಂಂದಿಡಲಾದ ಕಾಗದ ಪತ್ರಗಳಂ

ಶ್ರೀ ಎ. ಲಕ್ಷ್ಮೀಸಾಗರ್.——ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂಂತ್ರಿಗಳ ಹೆಸರಿನ ಮಂಂದಿರಂವ ಈ ಕೆಳಕಂಡ ಕಾಗದ ಪತ್ರವನ್ನು ಸಭೆಯ ಮಂಂದಿಡಂತ್ತೇನೆ.

> " ಕರ್ನಾಟಕ ಮಾರಾಟ ತೆರಿಗೆಯಂ ಶಾಸನದ ೫೯ನೇ ಕಲಮಿನ ಮೇರೆಗೆ ಹೀಟ್ ಪಂಪ್ ಗಳಿಗೆ ಮಾರಾಟ ತೆರಿಗೆ ವಿನಾಯಂತಿ ನೀಡುವ ಬಗ್ಗೆ ದಿನಾಂಕ ೨೦ನೇ ಜನವರಿ ೧೯೮೭ ರಂದು ಹೊರಡಿಸಲಾದ ಎಫ್‌ಡಿ ೯೨ ಸಿಎಸ್‌ಎಲ್ ೮೬ನೇ ಕ್ರಮಾಂಕದ ಅಧಿಸೂಚನೆ"

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಮಾನ್ಯ ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂಂತ್ರಿಗಳ ಹೆಸರಿನ ಮಂಂದಿರಂವ ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಂತ್ತೇನೆ.

೧೯೫೭ನೇ ಇಸವಿಯ ಕಂಪನಿಗಳ ಶಾಸನದ ೬೧೯ (ಎ) (೩)ನೇ ಕಲಮಿನ ಮೇರೆಗೆ :—

೧) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ೧೯೮೩–೮೪ನೇ ಸಾಲಿನ ವಾರ್ಷಿಕ ವರದಿ

೨) ನೂತನ ಸರ್ಕಾರಿ ವಿದ್ಯುತ್ ಕಾರ್ಖಾನೆಯ ೧೯೮೫–೮೬ನೇ ಸಾಲಿನ ವಾರ್ಷಿಕ ವರದಿ

೩) ಮೂರಂಕಟ್ಟೆ ಸಲಹೆಗಳಂ ಹಾಗೂ ಏಜೆನ್ಸಿ ನಿಯಂಮಂತ ಇದರ ೧೯೮೫–೮೬ನೇ ಸಾಲಿನ ವಾರ್ಷಿಕ ವರದಿ

೪) ೧೯೫೨ನೇ ಇಸವಿಯ ತನಿಖಾ ಆಯೋಗಗಳ ಶಾಸನದ ೩ (೪)ನೇ ಕಲಮಿನ ಮೇರೆಗೆ: ಭಾರತ ಸರಕಾರದಿಂದ ಕರ್ನಾಟಕ ರಾಜ್ಯಕ್ಕೆ ೧೯೭೯–೮೦ನೇ ಸಾಲಿನಿಂದ ೧೯೮೧–೮೨ನೇ ಸಾಲಿನವರೆಗೆ ಹಂಚಿಕೆಯಾಗಿದ್ದ ಸಿಮೆಂಟನ್ನು ವಿತರಣೆ ಮಾಡಿರುವುದರಲ್ಲಿ ಆಗಿರುವ ಅವ್ಯವಹಾರಗಳ ಬಗ್ಗೆ ಶ್ರೀ ಬಿ. ವೆಂಕಟಸ್ವಾಮಿ ತನಿಖಾ ಆಯೋಗದ ವರದಿಯನ್ನು ಹಾಗೂ ಅದರ ಮೇಲೆ ಸರಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ಜ್ಞಾಪನ ಪತ್ರ.

ಅಧ್ಯಕ್ಷರು.—ಎಲ್ಲಾ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡಲಾಯಿತು.

೧೦-೦೦ ಎ. ಎಂ.

ಗಮನ ಸೆಳೆಯುವ ಸೂಚನೆ

ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಹರಡಿರುವ ಕರುಳು ಬೇನೆಯಿಂದ ಉದ್ಭವಿಸಿದ ಪರಿಣಾಮಗಳ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಗುಲಬರ್ಗಾ ಜಿಲ್ಲೆಯ ಚಿಂಚೋಳಿ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಕರುಳು ಬೇನೆಯಿಂದ ಉದ್ಭವಿಸಿರುವ ಪರಿಣಾಮಗಳ ಬಗ್ಗೆ ಮಾನ್ಯ ಆರೋಗ್ಯ ಮತ್ತು ಅಬ್ಕಾರಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿ ಅಬ್ಕಾರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಮೇಲ್ಕಂಡ ಗಮನ ಸೆಳೆಯುವ ಸೂಚನೆಗೆ ಈ ಕೆಳಗಿನ ಲಿಖಿತ ಹೇಳಿಕೆಯನ್ನು ನೀಡಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಕಲ್ಬುರ್ಗಿ ಜಿಲ್ಲೆ ಚಿಂಚೋಳಿ ತಾಲ್ಲೂಕಿನಲ್ಲಿ ದಿನಾಂಕ ೧೫-೨-೧೯೮೭ ರಿಂದ ಅತಿಸಾರ ರೋಗದ ೨೧ ಪ್ರಕರಣಗಳು ಮತ್ತು ೩ ಮರಣಗಳು ಸಂಭವಿಸಿದೆಯೆಂದು ವರದಿ ಆಗಿದೆ ಯಾದಗಿರಿ ತಾಲ್ಲೂಕಿನಲ್ಲಿ ಈ ವರ್ಷದ ಆರಂಭದಲ್ಲಿ ಅಂದರೆ ದಿನಾಂಕ ೧-೧-೧೯೮೭ ರಿಂದ ಸುಮಾರು ೬೧ ಪ್ರಕರಣಗಳು ಅತಿಸಾರ ರೋಗ ಆಗಿದ್ದು ಮರಣಗಳು ಯಾವುವು ಸಂಭವಿಸಿಲ್ಲವೆಂದು ವರದಿಯಾಗಿದೆ. ಆದರೆ ದಿನಾಂಕ ೨೮-೨-೧೯೮೭ ರಿಂದ ಇಂತಹ ಪ್ರಕರಗಳು ಈ ತಾಲ್ಲೂಕಿನಲ್ಲಿ ವರದಿಯಾಗಲಿಲ್ಲ. ಮುಂಜಾಗ್ರತೆಯಾಗಿ ಯಾದಗಿರಿ ತಾಲ್ಲೂಕಿನಲ್ಲಿ ಸುಮಾರು ೨೫,೪೨೬ ಜನರಿಗೆ ಕಾಲರಾ ಚುಚ್ಚ್ಮು ಮದ್ದು ಕೊಡಲಾಗಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ೨೧೧೧ ಜನರಿಗೆ ಕಾಲರ ಚುಚ್ಚ್ಮು ಮದ್ದನ್ನು ಈ, ತಾಲ್ಲೂಕಿನ ಚಿಂಚೋಳಿ ಗಂಗವಳ್ಳಿ, ಕುಂಚಾವರ, ಪತ್ತೆಪುರ, ಹುಡದಳ್ಳಿ, ಕಾನಾಪುರಗಳಲ್ಲಿ ಕೊಡಲಾಗಿದೆ ಇದೂ ಅಲ್ಲದೆ ಮುಂಜಾಗ್ರತೆ ಕ್ರಮವಾಗಿ ಚಿತ್ತಾಪುರ ತಾಲ್ಲೂಕಿನಲ್ಲಿ ಮಂತ್ರ ಗುಲ್ಬರ್ಗಾ ತಾಲ್ಲೂಕಿನಲ್ಲಿ ಕುಡಿಯುವ ಭಾವಿಗಳಿಗೆ ಬ್ಲೀಚಿಂಗ್ ಪೌಡರ್ ಸಿಂಪಡಿಸಲಾಗಿದೆ. ಹಾಗೂ ಕಾಲರಾ ಚುಚ್ಚ್ಮು ಮದ್ದು ಕೂಡ ಕೊಡಲಾಗಿದೆ.

ಕಲ್ಬುರ್ಗಿ ಜಿಲ್ಲಾ ಆಸ್ಪತ್ರೆಯಲ್ಲಿ ನೀರಿನ ಅಭಾವದಿಂದ ಲವಣ ದ್ರವಗಳ ತಯಾರಿಕೆ ಸ್ವಲ್ಪ ವಂಟ್ಟಿಗೆ ಸ್ಥಗಿತಗೊಳಿಸಲಾಗಿದೆ ಎಂದು ವರದಿಯಾಗಿದೆ. ಆದರೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡಿ ಲವಣ ದ್ರವಗಳ ತಯಾರಿಕೆಯನ್ನು ಕೂಡಲೇ ತೆಗೆದುಕೊಳ್ಳಬೇಕೆಂದು ಸೂಚನೆ ನೀಡಲಾಗಿದೆ. ಈಗ ಬೀದರ್ ಜಿಲ್ಲೆ ಆಸ್ಪತ್ರೆಯಿಂದ ತಕ್ಷಣ ಈ ಲವಣ ದ್ರವಗಳನ್ನು ಚಿಂಚೋಳಿ ಮತ್ತು ಯಾದಗಿರಿ ತಾಲ್ಲೂಕುಗಳಿಗೆ ಸರಬರಾಜು ಮಾಡಿ ಚಿಕಿತ್ಸೆ ಕೊಡಬೇಕೆಂದು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಹಾಗೂ ಜಂಟಿ ನಿರ್ದೇಶಕರು, ಗುಲ್ಬರ್ಗಾ ಅವರಿಗೆ ಸೂಚಿಸಲಾಗಿದೆ. ಇತ್ತೀಚಿನ ವರದಿಗಳ ಪ್ರಕಾರ ಚಿಂಚೋಳಿ ತಾಲ್ಲೂಕಿನಲ್ಲಿ ಅತಿಸಾರ ರೋಗಕ್ಕೆ ಒಳಗಾದ ಪ್ರಕರಣಗಳು ಇಲ್ಲವೆಂದು ವರದಿಯಾಗಿದೆ.

ಅಧ್ಯಕ್ಷರೇ, ಇದರ ಜೊತೆಗೆ ಇಪತ್ತಿನ ಬೆಳಿಗ್ಗೆ ನಾನು ತರಿಸಿರತಕ್ಕಂಥ ಸುದ್ದಿಯ ಪ್ರಕಾರ ಗುಲ್ಬರ್ಗಾ ಜಿಲ್ಲೆಯಲ್ಲಿ ಒಟ್ಟು ಮೇಲ್ಕಂಡ ತಾಲ್ಲೂಕುಗಳಲ್ಲಿ ೧೬ ಹಳ್ಳಿಗಳಲ್ಲಿ ಈ. ರೋಗ ತಗುಲಿದೆ. ೪೯ ಜನಕ್ಕೆ ಈ ರೋಗ ಅಂಟಿದ್ದು, ಇವರಲ್ಲಿ ಸತ್ತಿರತಕ್ಕಂಥವರ ಸಂಖ್ಯೆ ಮೂರು ಹಾಗೂ ಕೊನೆಯಲ್ಲಿ ಒಬ್ಬ ಒಟ್ಟು ೪ ಜನ ಸತ್ತಿದ್ದಾರೆ. ಈಗ ಬೀದರ್ ಬಳ್ಳಾರಿ ಆಸ್ಪತ್ರೆಗಳಿಂದ ಅವಶ್ಯಕವಾದಂಥ ಎಲ್ಲಾ ಔಷಧಿಗಳನ್ನು ಕೂಡಾ ಕಳುಹಿಸಿ, ಈ ರೋಗ ಯಾವ ಭಾಗದಲ್ಲಿ ತಗುಲಿದೆ, ಅಲ್ಲಲ್ಲಿ ಮುಂಜಾಗರೂಕತಾ ಕ್ರಮವಾಗಿ ರೋಗ ಬಾರದ ಹಾಗೆ ವ್ಯವಸ್ಥೆ ಮಾಡಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ ಸುಮಾರು ೨೧ ಪ್ರಕರಣಗಳು ಚಿಂಚೋಳಿ ತಾಲ್ಲೂಕಿನಲ್ಲಿ ಸುಮಾರು ೬೧ ಪ್ರಕರಣಗಳು ಯಾದಗಿರಿ ತಾಲ್ಲೂಕಿನಲ್ಲಿ ಆಗಿವೆ. ಸುಮಾರು ೨೫,೪೨೬ ಜನರಿಗೆ ನೀವು ಈಗಾಗಲೇ ಇಂಜೆಕ್ಷನ್ ಕೊಡಿಸಿತಕ್ಕಂಥ